## ಕರ್ನಾಟಕ ಮಾಹಿತಿ ಆಯೋಗದಲ್ಲಿ ದಿ: 27-04-2019 ರಂದು ಬೆಳಗ್ಗೆ 11:30 ಕ್ಕೆ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ.

**ಸಭೆಯಲ್ಲಿ ಹಾಜರಿದ್ದವರು:-**

1. ಶ್ರೀ ಎಲ್. ಕೃಷ್ಣಮೂರ್ತಿ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು.
2. ಶ್ರೀ ಎನ್.ಪಿ. ರಮೇಶ್, ರಾಜ್ಯ ಮಾಹಿತಿ ಆಯುಕ್ತರು.
3. ಶ್ರೀಮತಿ ಸಾವಿತ್ರಿ, ಮುಖ್ಯ ವಾಸ್ತುಶಿಲ್ಪಿ, ಕರ್ನಾಟಕ ಸರ್ಕಾರ.
4. ಶ್ರೀಮತಿ ಶ್ರೀದೇವಿ, ಉಪ ವಾಸ್ತುಶಿಲ್ಪಿ, ಕರ್ನಾಟಕ ಸರ್ಕಾರ.
5. ಶ್ರೀಮತಿ ಹೊನ್ನಾಂಬ .ಎಸ್, ಕಾರ್ಯದರ್ಶಿ, ಕರ್ನಾಟಕ ಮಾಹಿತಿ ಆಯೋಗ.
6. ಶ್ರೀ ಶ್ರೀಕಾಂತ್, ಸಹಾಯಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ನಂ.7 ಕಟ್ಟಡಗಳ ಉಪವಿಭಾಗ.

ಮಾನ್ಯ ಮುಖ್ಯ ಮಾಹಿತಿ ಆಯುಕ್ತರು ಸಭೆಗೆ ಆಗಮಿಸಿದ್ದ ಲೋಕೋಪಯೋಗಿ ಇಲಾಖೆಯ ಪ್ರಧಾನ ವಾಸ್ತುಶಿಲ್ಪಿ ಹಾಗೂ ಇತರರನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು.

**ಸಭೆಯಲ್ಲಿ ಚರ್ಚಿಸಲಾದ ವಿಷಯ:**

ಸರ್ಕಾರವು ಮುಖ್ಯ ಮಾಹಿತಿ ಆಯುಕ್ತರು ಹಾಗೂ ಇಬ್ಬರು ಮಾಹಿತಿ ಆಯುಕ್ತರ ನೇಮಕಕ್ಕೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸಿದ್ದು, ಮುಖ್ಯ ಮಾಹಿತಿ ಆಯುಕ್ತರು ಹಾಗೂ ಮಾಹಿತಿ ಆಯುಕ್ತರುಗಳು ಕೆಲವೇ ದಿನಗಳಲ್ಲಿ ಪ್ರಮಾಣ ವಚನ ಸ್ವೀಕರಿಸಬಹುದಿದ್ದು, ಅವರಿಗೆ ಕಾರ್ಯನಿರ್ವಹಿಸಲು ಸ್ಥಳಾವಕಾಶ ಒದಗಿಸಲು ಕ್ರಮವಹಿಸಬೇಕಿರುತ್ತದೆ.

ಪ್ರಸ್ತುತ ಮಾಹಿತಿ ಸೌಧದಲ್ಲಿ 7 ನ್ಯಾಯಾಲಯ ಸಭಾಂಗಣಗಳು ಕಾರ್ಯನಿರ್ವಹಿಸಲು ಅವಕಾಶವಿದ್ದು, ಉಳಿದ 3 ನ್ಯಾಯಾಲಯ ಸಭಾಂಗಣಗಳನ್ನು ಮಿಥಿಕ್ ಸೊಸೈಟಿಯ ಕಟ್ಟಡದಲ್ಲಿ ಕಾರ್ಯನಿರ್ವಹಿಸಲು ಸಜ್ಜುಗೊಳಿಸಬೇಕಿರುವ ಹಿನ್ನಲೆಯಲ್ಲಿ ಚರ್ಚಿಸಲು ಸಭೆಯನ್ನು ಕರೆಯಲಾದ ಬಗ್ಗೆ ಮುಖ್ಯ ಮಾಹಿತಿ ಆಯುಕ್ತರು ತಿಳಿಸಿದರು.

ದಿ ಮಿಥಿಕ್ ಸೊಸೈಟಿಯ ಕಟ್ಟಡದಲ್ಲಿ 3 ಜನ ಮಾಹಿತಿ ಆಯುಕ್ತರು ಕಾರ್ಯನಿರ್ವಹಿಸಲು ಮೊದಲ ಮಹಡಿಯ 4800 ಚದರ ಅಡಿ ವಿಸ್ತೀರ್ಣದಲ್ಲಿ 3 ನ್ಯಾಯಾಲಯ ಸಭಾಂಗಣ, 3 ಆಯುಕ್ತರ ಕೊಠಡಿ ಹಾಗೂ 3 ನ್ಯಾಯಾಲಯಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ಕೊಠಡಿ ವ್ಯವಸ್ಥೆ ಮಾಡುವ ಬಗ್ಗೆ ತ್ವರಿತವಾಗಿ ಕ್ರಮ ವಹಿಸುವಂತೆ ಮಾನ್ಯ ಮುಖ್ಯ ಮಾಹಿತಿ ಆಯುಕ್ತರು ಮುಖ್ಯ ವಾಸ್ತುಶಿಲ್ಪಿರವರಿಗೆ ಕೋರಿದರು.

ಮುಖ್ಯ ವಾಸ್ತುಶಿಲ್ಪಿರವರು ಈಗಾಗಲೇ ನಕ್ಷೆಯನ್ನು ನೀಡಿದ್ದು ಅದಕ್ಕೆ ಮೇಲುಸಹಿಯೊಂದಿಗೆ ಹಿಂದಿರುಗಿಸಿದಲ್ಲಿ ಮಾರ್ಪಾಡಿಗೆ ತಗಲುವ ಅಂದಾಜು ವೆಚ್ಚದ ವಿವರವನ್ನು ಕಳುಹಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

ಮಾರ್ಪಾಡಿಗೆ ಸಂಬಂಧಿಸಿದಂತೆ ಸಲ್ಲಿಸಿರುವ ನಕ್ಷೆಯನ್ನು ಮೇಲು ರುಜುವಿನೊಂದಿಗೆ ಸಲ್ಲಿಸುವಂತೆ ಹಾಗೂ ನೀಡಲಾಗುವ ಅಂದಾಜು ವೆಚ್ಚದ ವಿವರವನ್ನು ಅನುದಾನ ಬಿಡುಗಡೆಗಾಗಿ ಹಾಗೂ ತ್ವರಿತವಾಗಿ ಮಾರ್ಪಾಡು ಮಾಡಬೇಕಾದ ಹಿನ್ನಲೆಯಲ್ಲಿ ಲೋಕೋಪಯೋಗಿ ಇಲಾಖೆಗೆ 4ಜಿ ಅನುಮತಿಗಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಿಆಸುಇ (ಜನಸ್ಪಂದನ)ರವರಿಗೆ ಸಲ್ಲಿಸಲು ಕ್ರಮವಹಿಸುವಂತೆ ಮುಖ್ಯ ಮಾಹಿತಿ ಆಯುಕ್ತರು ಕಾರ್ಯದರ್ಶಿಯವರಿಗೆ ಸೂಚಿಸಿದರು.

ದಿ ಮಿಥಿಕ್ ಸೊಸೈಟಿಯ ಕಟ್ಟಡದಲ್ಲಿ ಚರ್ಚಿಸಲಾದ ಮಾರ್ಪಾಡುಗಳನ್ನು ತ್ವರಿತವಾಗಿ ಅಳವಡಿಸುವಂತೆ ಮಾನ್ಯ ಮುಖ್ಯ ಮಾಹಿತಿ ಆಯುಕ್ತರು ಮುಖ್ಯ ವಾಸ್ತುಶಿಲ್ಪಿರವರಿಗೆ ತಿಳಿಸಿ, ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

27/4/2019

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು